

## ಹೂಡಿಕೆಗೆ ಗೂಗಲ್ ಸಿದ್ಧ

ಕಳೆದ ವರ್ಷ ನವೆಂಬರ್‌ನಲ್ಲಿ 'ಗೂಗಲ್'ನ 44 ವರ್ಷ ವಯಸ್ಸಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುಂದರ್ ಪಿಚೈ ಒಂದು ಮುಖ್ಯ ಸಭೆ ನಡೆಸಿದರು. ತಿಂಗಳುಗಳಿಂದ ಯೋಜನೆಯೊಂದನ್ನು ಹಾಕಿಕೊಂಡು, ಕೆಲಸ ಮಾಡಿದ್ದ ಐದಾರು ಪ್ರತಿಭಾವಂತರ ತಂಡ ವಿಷಯವೊಂದನ್ನು ಮಂಡಿಸಿತು. ಫೋಟೊಗಳು ಹಾಗೂ ಗೂಗಲ್ ಡ್ರೈವ್ ಜತೆ ವೃದ್ಧಿಸಬಹುದಾದ ಸಂಬಂಧ ಹಾಗೂ ಗ್ರಾಹಕ ಬಳಕೆಯ ಆ್ಯಪ್‌ಗಳ ಮೂಲಕ ಜನರೊಟ್ಟಿಗೆ ಬೆಸೆಯಬಹುದಾದ ಭಾವನಾತ್ಮಕ ಸಂಬಂಧಗಳ ಕುರಿತು ಮಂಡಿತವಾದ ವಿಷಯ ಅದು. ದೀರ್ಘಾವಧಿಯ ಆ ಸಭೆಯಲ್ಲಿ ಪ್ರತಿಭಾವಂತರು ಹೇಳಿದ ವಿಷಯಗಳನ್ನು ಕೇಳಿ ಸುಂದರ್ ಬಾಯಿಯಿಂದ 'ಅದ್ಭುತ' ಎಂಬ ಉದ್ಗಾರ ಹೊರಟಿತ್ತು.

2015ರಿಂದ ಗೂಗಲ್‌ನ ಸಿಇಒ ಆಗಿರುವ ಸುಂದರ್ ಪಿಚೈ ಅವರ ಮಹತ್ವಾಕಾಂಕ್ಷೆ 'ಕ್ಲಾಸಿಕ್ ಗೂಗಲ್'. ಅದಕ್ಕೂ ಕೃತಕ ಜ್ಞಾನಶಾಖೆಗೂ ನಡುವೆ ದೊಡ್ಡ ಸಂಬಂಧವಿದೆ.

ಕೃತಕ ಜ್ಞಾನಾಧಾರಿತ ಪರಿಕರಗಳನ್ನು ಸಮರ್ಥವಾಗಿ ಅಭಿವೃದ್ಧಿಗೊಳಿಸುವ ತಂಡದ ಬೆನ್ನು ತಟ್ಟುತ್ತಿರುವ ಸುಂದರ್, ಮುಂದಿನ ಕೆಲವು ವರ್ಷಗಳಲ್ಲಿ 'ಗೂಗಲ್' ಆ ಹಾದಿಯಲ್ಲಿ ಮಹತ್ವದ ಹೆಜ್ಜೆಗಳನ್ನು ಇಡಲಿದೆ ಎಂಬ ಸೂಚನೆಯನ್ನಂತೂ ಕೊಟ್ಟಿದ್ದಾರೆ. ಕಳೆದ ವರ್ಷ ನಡೆದ ಸಭೆ ಅದರದ್ದೊಂದು ಝಲಕ್ ಅಷ್ಟೆ. ಅಂಥ ಹಲವು ಸಭೆಗಳು ಇನ್ನು ಮುಂದೆ ನಿರಂತರವಾಗಿ ನಡೆಯಲಿವೆ.

'ಮನುಷ್ಯರಿಗೆ ನೆರವಾಗುವ ಸಾಮಾನ್ಯ ಕೃತಕ ಜ್ಞಾನವನ್ನು ನಾನು ಸದಾ ಇಷ್ಟಪಡುತ್ತೇನೆ. ಈ ವಿಷಯದಲ್ಲಿ ಮಹತ್ವಾಕಾಂಕ್ಷಿ ನಾನು. ಇದಕ್ಕೆ 'ಮೂನ್‌ಶಾಟ್' ಎಂದು ಕರೆಯಬೇಕೆನ್ನುವುದು ನನ್ನ ಇಷ್ಟ. ತಂತ್ರಜ್ಞಾನವು ಬದುಕನ್ನು ರಮಣೀಯವಾಗಿಸುವ, ಇನ್ನಷ್ಟು ಮತ್ತಷ್ಟು ಹಸನಾಗಿಸುವ ಸಾಧ್ಯತೆಗೆ ನಾವೆಲ್ಲಾ ದೊಡ್ಡ ಮಟ್ಟದಲ್ಲಿ ತೆರೆದುಕೊಂಡಿದ್ದೇವೆ. ಅದರ ಫಲ ಕೂಡ ಆದಷ್ಟು ಬೇಗ ದಕ್ಕಲಿದೆ' ಎನ್ನುವುದು ಸುಂದರ್ ಆತ್ಮವಿಶ್ವಾಸದ ಮಾತು.